**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ27-11-2025**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ವಿ ಎಸ್ ವಕೀಲರಿಂದ**

ನಾನು ಬಿ ಬಿ ಎ ಪದವಿದರನಾಗಿರುತ್ತೇನೆ. ನಾನು ಬೆಂಗಳೂರಿನ ಯೂನಿವರ್ ಸಿಟಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಈಗ ಸಕಲೇಶಪುರದಲ್ಲಿ ವಾಸವಿರುತ್ತೇನೆ. ನನ್ನ ತಂದೆ 1 ನೇ ಪ್ರತಿವಾದಿಯವರು ಮನೆಯಲ್ಲಿ ಇರುತ್ತಾರೆ. ಅವರಿಗೆ ಸ್ಟ್ರೋಕ್ ಆಗಿರುತ್ತದೆ. ವಾದಿ ನನ್ನ ತಂದೆಯ ಅಕ್ಕ ಇರುತ್ತಾರೆ. ನನ್ನ ಅಜ್ಜನ ಹೆಸರು ಜವರೇಗೌಡ ಎಂದು ಇರುತ್ತದೆ. ನಿ ಪಿ 10 ವಂಶವೃಕ್ಷ ಸರಿಯಿರುತ್ತದೆ. ದಾವ ಆಸ್ತಿಯ ದಾಖಲಾತಿಗಳನ್ನು ನಾನು ನೋಡಿ ತಿಳಿದುಕೊಂಡಿರುತ್ತೇನೆ. ದಾವ ಆಸ್ತಿಯ ಖಾತೆ ನಂಬರ್ 1607/1447 ಇರುತ್ತದೆ. ಅದು 42*48 ಅಡಿ ಇರುತ್ತದೆ ಎಂದರೆ ಸರಿ. ದಾವ ಆಸ್ತಿಯಲ್ಲಿ ಮೂಲತಃ ನನ್ನ ಅಜ್ಜ ಜವರೇಗೌಡ ಮತ್ತು ಅಜ್ಜಿ ನಿಂಗಮ್ಮ ರವರು ವಾಸವಿದ್ದ ಜಾಗ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಅಜ್ಜಿ ನಿಂಗಮ್ಮ ರವರು ದಾವ ಆಸ್ತಿ ಖರೀದಿಸಿ ವಾಸ ಇದ್ದರು ಎಂದು ನುಡಿಯುತ್ತಾರೆ. ನಾನು ಕ್ರಯ ಪತ್ರ ನೋಡಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ದಾವ ಆಸ್ತಿ ಪುರಸಭೆಯಿಂದ ಮಂಜೂರಾದ ಆಸ್ತಿ ಎಂದರೆ ಸರಿಯಲ್ಲ. ಬಗರ್ ಹುಕಂ ಸಾಗುವಳಿಯಿಂದ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಅಜ್ಜಿ ವಿಲ್ ಮಾಡಿದ್ದು, ಆ ಪ್ರಕಾರ ದಾವ ಆಸ್ತಿ ಅವರ ಮರಣದ ನಂತರ 1 ನೇ ಪ್ರತಿವಾದಿ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆ. ನಾನು ವಿಲ್ ನ್ನು ಓದಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಯಾವುದೇ ವಿಲ್ ಆಗಿಲ್ಲ ಮತ್ತು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜ ಮತ್ತು ಅಜ್ಜಿ ಮರಣದ ನಂತರ ದಾವ ಆಸ್ತಿ ವಾದಿ ಮತ್ತು 1 ನೇ ಪ್ರತಿವಾದಿಯ ಜಂಟಿ ಹೆಸರಿಗೆ ಖಾತೆ ಬದಲಾವಣೆಯಾಗಬೇಕಿತ್ತು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಅಧಿಕಾರಿಗಳೊಂದಿಗೆ ಶಾಮೀಲಾಗಿ ತಮ್ಮ ಹೆಸರಿಗೆ ಮಾತ್ರ ಖಾತೆ ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ನನ್ನ ಹೆಸರಿಗೆ ದಾನಪತ್ರ ಮಾಡಿಕೊಟ್ಟಿರುತ್ತಾರೆ. ನನ್ನ ತಂದೆಗೆ ಆರೋಗ್ಯ ಸರಿಯಿಲ್ಲದ ಕಾರಣ ನನ್ನ ಹೆಸರಿಗೆ ದಾನಪತ್ರ ಮಾಡಿಕೊಟ್ಟಿರುತ್ತಾರೆ. ಸದರಿ ವಿಚಾರ ದಾನಪತ್ರದಲ್ಲಿ ಬರೆದಿರುವುದಿಲ್ಲ. ಸದರಿ ವಿಚಾರ ಬರೆಸಲು ನಮಗೆ ತೊಂದರೆ ಇರಲಿಲ್ಲ. ದಾನಪತ್ರದಲ್ಲಿ ವಿಲ್ ನ ವಿವರಣೆಗಳ ಬಗ್ಗೆ ಬರೆಸಿರುವುದಿಲ್ಲ ಎಂದರೆ ಸರಿ. ಯಾವುದೇ ವಿಲ್ ಆಗಿರದ ಕಾರಣ ನಾನು ಅದನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿ ಪಿ 3 ರಂತೆ ನನ್ನ

ಅಜ್ಜಿಯ ಹೆಸರಿಗೆ ಬಕರ್ ಹುಕಂ ನಂತೆ ನಿವೇಶನ ಮಂಜೂರು ಎಂದು ನಮೂದಾಗಿದೆ ಎಂದರೆ ಸರಿ. ಕಂದಾಯ ದಾಖಲಾತಿಗಳಲ್ಲಿ ನನ್ನ ಅಜ್ಜಿ ಬಕರ ಹುಕಂ ಸಾಗುವಳಿ ಮಂಜೂರಾತಿಯಲ್ಲಿ ಮನೆ ಕಟ್ಟಿರುತ್ತಾರೆ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಆ ರೀತಿ ದಾಖಲಾತಿಗಳು ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿ ಪಿ 8 ಮತ್ತು 9 ರಲ್ಲಿ ಇರುವ ಮನೆ ನಮ್ಮದೇ ಆಗಿರುತ್ತದೆ. ಅಲ್ಲಿ 12 ಅಡಿಯಷ್ಟು ಖಾಲಿ ಜಾಗ ಇರುತ್ತದೆ. ದಾವ ಆಸ್ತಿ ಮೂಲತಃ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ವಾದಿ ಮತ್ತು 1 ನೇ ಪ್ರತಿವಾದಿಗೆ ಸಮಾನ ಭಾಗ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿಗೆ ಮದುವೆ ಮಾಡಿಕೊಟ್ಟ ನಂತರ ಅವರ ಒಪ್ಪಿಗೆ ಪಡೆದು 1 ನೇ ಪ್ರತಿವಾದಿಗೆ ಖಾತೆ ಬದಲಾವಣೆಯಾಗಿರುತ್ತದೆ ಎಂದು ನುಡಿಯುತ್ತಾರೆ. ವಾದಿಯ ಮದುವೆ ಸಮಯದಲ್ಲಿ ಅವರಿಗೆ ಮದುವೆ ಮಾಡಿಕೊಟ್ಟು ಆಭರಣಗಳನ್ನು ನೀಡಿದ್ದು ಆದ್ದರಿಂದ ದಾವ ಆಸ್ತಿಯಲ್ಲಿ ವಾದಿ ಹಕ್ಕು ಬಿಡುಗಡೆ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ದಿಃ 20.03.1990 ರಲ್ಲಿ ಹಕ್ಕು ಬಿಡುಗಡೆ ಮಾಡಿಕೊಟ್ಟಿರುತ್ತಾರೆ. ಸದರಿ ಹಕ್ಕು ಬಿಡುಗಡೆ ಪತ್ರವನ್ನು ಹಾಜರುಪಡಿಸಿರುತ್ತೇನೆ. ಆ ರೀತಿ ಯಾವುದೇ ಪತ್ರ ಆಗಿಲ್ಲ ಮತ್ತು ಹಕ್ಕು ಬಿಡುಗಡೆ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಯಾವುದೇ ಪತ್ರ ಹಾಜರುಪಡಿಸದೇ ಇದ್ದರೂ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಗೆ ನನ್ನ ಹೆಸರಿಗೆ ದಾನಪತ್ರ ಮಾಡಿಕೊಡುವ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಿ ಡಿ 5 ದಾನ ಪತ್ರ ವಾದಿಗೆ ಬದ್ದಪಡಿಸುವುದಿಲ್ಲ ಎಂದರೆ ಸರಿಯಲ್ಲ. ನಾನು ಕಾನೂನು ಬಾಹಿರವಾಗಿ ದಾನಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿ ಈ ದಾವೆಯಲ್ಲಿ ಯಾವ ಪರಿಹಾರ ಕೇಳಿರುತ್ತಾರೆ ಎಂದು ಗೊತ್ತಿಲ್ಲ. ನಾನು ಹಾಕಿರುವ ಪ್ರತಿವಾದ ಪತ್ರ ಗೊತ್ತಿರುತ್ತದೆ. ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**